**ಮೂ.ದಾ.ನಂ.** 79/2025

ಪಿ.ಡಬ್ಲ್ಯು.1

(ಇಂದು ದಿನಾಂಕ: **08-04-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ. ಜಿ.ಆರ್.ಡಿ. ವಕೀಲರಿಂದಃ**

1. ನಾನು ರಾ ದಾವೆಯ ಸಾಲ ಕೊಡಬೇಕಾದರೆ ಶಾಖಾ ವ್ಯವಸ್ಥಾಪಕನಾಗಿರಲಿಲ್ಲ. ಆದ್ದರಿಂದ ನನಗೆ ಈ ಪ್ರಕರಣದ ಕುರಿತಾಗಿ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಸಾಲವನ್ನು ವಿದ್ಯಾಭ್ಯಾಸಕ್ಕಾಗಿ ಪಡೆದುಕೊಂಡಿರುತ್ತಾರೆ. ಈ ಪ್ರಕರಣದ ಸಾಲವನ್ನು ನೀಡಬೇಕಾದರೆ ಅದಕ್ಕೆ ಬೇಕಾದಂತಹ ಎಲ್ಲಾ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇವೆ. 1ನೇ ಪ್ರತಿವಾದಿಯು ಬಿ ಎಸ್ ಯು ನರ್ಸಿಂಗ್ ವಿದ್ಯಾಭ್ಯಾಸವನ್ನು ಮಾಡಲು ಸಾಲವನ್ನು ಪಡೆದುಕೊಂಡಿರುತ್ತಾರೆ.

2. ಈ ಪ್ರಕರಣದ ಸಾಲವನ್ನು ಯಾವ ದಿನಾಂಕದಂದು ಪಡೆದುಕೊಂಡಿರುತ್ತಾರೆ ಎಂದು ನನಗೆ ಈಗ ನೆನಪಿಲ್ಲ. ಎಷ್ಟು ಹಣಕ್ಕಾಗಿ ಸಾಲದ ಅರ್ಜಿಯನ್ನು ಸಲ್ಲಿಸಿದ್ದಾರೆ ಎಂಬುವುದನ್ನು ನಾನು ದಾಖಲಾತಿಯನ್ನು ನೋಡಿ ಹೇಳಬೇಕಾಗುತ್ತದೆ. ಈ ಪ್ರಕರಣದ ಕುರಿತಾಗಿ ನನಗೆ ವಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಈ ಪ್ರಕರಣದ ಸಾಲದ ಬಡ್ಡಿಯು 9.65 ಪ್ರತಿಶತದಲ್ಲಿ ಸಾಲವನ್ನು ನೀಡಿರುತ್ತೇವೆ. ಸಾಮಾನ್ಯವಾಗಿ ವಿದ್ಯಾಭ್ಯಾಸದ ಸಾಲವನ್ನು ಅವರು ವಿದ್ಯಾಭ್ಯಾಸವನ್ನು ಮುಗಿಸಿದ 1 ವರ್ಷದ ನಂತರ 10 ವರ್ಷಗಳ ಒಳಗಾಗಿ ಸಾಲವನ್ನು ಮರು ಪಾವತಿ ಮಾಡಬೇಕಾಗುತ್ತದೆ.

3. 1ನೇ ಪ್ರತಿವಾದಿಯು ಎಷ್ಟು ಸಾಲವನ್ನು ಭರಣ ಮಾಡಿರುತ್ತಾರೆ ಎಂಬುವುದನ್ನು ಖಾತೆ ನೋಡಿ ಹೇಳಬೇಕಾಗುತ್ತದೆ. ಸಾಕ್ಷಿಗೆ ನಿಪಿ 40 ನ್ನು ತೋರಿಸಲಾಗಿ 74 ಸಾವಿರ ಭರಣ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾವು ಸಾಲವನ್ನು ನೀಡಬೇಕಾದರೆ ಕಾಲೇಜಿಗೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು

**ಮೂ.ದಾ.ನಂ.** 79/2025

ಪಿ.ಡಬ್ಲ್ಯು.1

ಪಡೆದುಕೊಂಡಿರುತ್ತೇವೆ. ಪ್ರತಿವಾದಿಯರು ಯಾವುದೇ ದಾಖಲಾತಿಗೆ ಸಹಿ ಹಾಕಲಿಲ್ಲ ಎಂದರೆ ಸರಿಯಲ್ಲ. ರಾ೦ ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ನಾವು ಪರವಾನಿಯನ್ನು ಪಡೆದುಕೊಳ್ಳುವ ಯಾವುದೇ ಅವಶ್ಯಕತೆ ಇರುವುದಿಲ್ಲ. ಬ್ಯಾಂಕಿನ ಎಲ್ಲಾ ಲೆಕ್ಕ ಪತ್ರಗಳನ್ನು ಸರಿಯಾಗಿ ನಿರ್ವಹಿಸಬೇಕು ಎಂದರೆ ಸರಿ. ರಾ೦ ಪ್ರಕರಣದ ಎಲ್ಲಾ ದಾಖಲಾತಿಗಳನ್ನು ಸರಿಯಾಗಿ ನಿರ್ವಹಿಸಿರುತ್ತೇವೆ.

4. ಈ ಪ್ರಕರಣದ ಸಾಲದ ಮರು ಪಾವತಿಗಾಗಿ ಪ್ರತಿವಾದಿಯರಿಗೆ ನೊಟೀಸನನ್ನು ನೀಡಿರುತ್ತೇವೆ. ನಾವು ಮೂರು ಬಾರಿ ನೊಟೀಸನ್ನು ನೀಡಿರುತ್ತೇವೆ. ನಾವು ನಮ್ಮ ವಕೀಲರ ಮುಖಾಂತರ 1 ಬಾರಿ ನೊಟೀಸನ್ನು ನೀಡಿರುತ್ತೇವೆ. ನಾವು ಷದ್ರಿ ನೊಟೀಸನಲ್ಲಿ ಹಾಗೂ ನಮ್ಮ ವಾದ ಪತ್ರದಲ್ಲಿ ಪ್ರತಿವಾದಿಯರು 74 ಸಾವಿರ ಭರಣ ಮಾಡಿರುವ ಕುರಿತಾಗಿ ಹೇಳಿರುವುದಿಲ್ಲ. ವಾದ ಪತ್ರದ 6ನೇ ಪ್ಯಾರಾದಲ್ಲಿ ಬರೆದಂತಹ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ಸಾಲವನ್ನು ಭರಣ ಮಾಡಲು ಪ್ರತಿವಾದಿಯರಿಗೆ ಇನ್ನೂ ಸಮಯವಕಾಶ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಾವು ಸಾಲದ ಕಂತು ಬಾಕಿಯಾದ ತಕ್ಷಣ ಅದು ಎಮ್.ಪಿ.ಎ. ಆದ ಕೂಡಲೇ ನಾವು ವಸೂಲಾತಿಯ ಕ್ರಮವನ್ನು ಕೈಗೊಳ್ಳಬೇಕು ಎಂದು ನುಡಿಯುತ್ತಾರೆ. ನಾವು ನ್ಯಾಯಾಲಯದ ಶುಲ್ಕವನ್ನು ಪಾವತಿಸಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರಭಾರ ಪ್ರಧಾನ ಸಿವಿಲ್ ಜಡ್ಜ, ಕುಮಟಾ